
ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಮಾರ್ಚ್ 2013 ಮಾಸ ಪತ್ರಿಕೆ

ಸಂಪುಟ : 35
ಸಂಚಿಕೆ : 7
ಪುಟ : 12
ಬೆಲೆ : ₹ 5/-

## ಎಲ್ಲೋರಾ ಪ್ರವಾಸ ಕಥನ



A Journal of Karnataka State Secondary Teachers' Association

# ಸಂಪಾದಕೀಯ...

ಚೈತ್ರದ ಆಗಮನಕ್ಕಾಗಿ ಕಾತರಿಸುವ ತಿಂಗಳು ಫಾಲ್ಗುಣ ಅಂದರೆ ಮಾರ್ಚ್. ಪ್ರಕೃತಿಯ ರಂಗಿನಾಟ ಈಗಾಗಲೇ ಪ್ರಾರಂಭವಾಗಿದೆ. ಇಂಥ ಕಾಲದಲ್ಲೇ ಆಸೆಗಳು ಚಿಗುರುವುದು. ಆದರೆ ಆಸೆಗಳೇ ದುಃಖಕ್ಕೆ ಮೂಲ ಎಂದ ಬುದ್ಧ, ಇಂಥ ಆಸೆಗಳನ್ನು ತಗ್ಗಿಸೆಂದು ಕಾಮನೆಗಳನ್ನು ಸುಟ್ಟ ಶಿವನಲ್ಲಿ ಬೇಡುವ ಶಿವರಾತ್ರಿಯ ಆಚರಣೆ ಮುಗಿದಿದೆ. ಆಸೆಗಳನ್ನು ದಮನಿಸುವ ಹೋಳಿ ಹಬ್ಬವೂ ಈ ಮಾಸದಲ್ಲೇ. ಇಂದು ಸಮಾಜ ಜೀವನ ಕಲುಷಿತಗೊಂಡಿರುವುದು ನಮ್ಮಲ್ಲಿನ ಆಸೆಗಳು ವಿಜೃಂಭಿಸಿರುವುದರಿಂದಲೇ. ಇಷ್ಟಿದ್ದರೆ ಅಷ್ಟು, ಅಷ್ಟಿದ್ದರೆ ಮತ್ತಷ್ಟು ಎಂದು ಮರಿಮಕ್ಕಳಿಗೂ ಕೂಡಿಡುವ ಪ್ರವೃತ್ತಿ ಜವಾನನಿಂದ ದಿವಾನನವರೆಗೆ ಮೈ ತುಂಬಿಕೊಂಡಿದೆ. ಇದರ ಪರಿಣಾಮ ಸಮಾಜದಲ್ಲಿ ಕಲಿತವರೆಲ್ಲ ಶ್ರೀಮಂತಿಕೆಯಲ್ಲಿ ಓಲಾಡುತ್ತ, ಕಲಿಯದವರು ಸಂಕಟಗಳ ಸಾಗರದಲ್ಲಿ ತೇಲಾಡುತ್ತಿದ್ದಾರೆ. ಕಳೆದ 65 ವರ್ಷಗಳಲ್ಲಿ, ವಿಶೇಷವಾಗಿ ಈ ಐವತ್ತು ವರ್ಷಗಳಲ್ಲಿ ನಮ್ಮ ಶಿಕ್ಷಣ ಪದ್ಧತಿಯು ಸಮಾಜದ ಒಡಕಿಗೇ ಇದ್ದವರು–ಇಲ್ಲದವರ ಕಂಟಕ ನಿರ್ಮಿಸಿ ಸಾಕಷ್ಟು ಹಾನಿ ಮಾಡಿದೆ. ಕಾಮಾಧಾರಿತವಾದ ಎಲ್ಲ ಸಮಾಜಗಳ ಸ್ಥಿತಿಯೂ ಹೀಗೆ, ಅದನ್ನು ಭಸ್ಮಮಾಡಿ ಧರ್ಮಾಧಾರಿತ ಸಮಾಜ ನಿರ್ಮಾಣ ಮಾಡಿರಿ ಎಂಬುದೇ ಕಾಮನ ಹಬ್ಬ ಅಥವಾ ಹೋಳಿ ಹಬ್ಬದ ಸಂದೇಶ ಇರಬಹುದೇ?

ಮುಂದಿನ ಸಂಚಿಕೆ ಹೊಸವರ್ಷದ ಮೊದಲ ಸಂಚಿಕೆ ಹಳತೆಲ್ಲ ಕಳೆದು ಹೊಸತು ಉದಯಿಸಬೇಕು. ಇದೇ ಚೈತ್ರ ವಿಶೇಷ. ಇದಕ್ಕನುಗುಣವಾಗಿ ಹೊಸ ಸಂಚಿಕೆಯಿಂದ ಹೊಸ ಸಂಪಾದಕರ ನೇತೃತ್ವ ಕಳೆದ 22 ವರ್ಷಕ್ಕೂ ಮೀರಿ ಈ ಪತ್ರಿಕೆಯ ಸಾರಥ್ಯ ನಡೆಸಿದ ನನಗೆ ಬದುಕಿನಲ್ಲಿ ಒಂದು ಉತ್ತಮ ಕೆಲಸ ಮಾಡಿದ ಧನ್ಯತಾ ಭಾವ ಈ ಕ್ಷಣದಲ್ಲಿ ಆವರಿಸಿದೆ. ಈ ಸಾಧನೆಯಲ್ಲಿ ಬಹುಪಾಲು ನನ್ನ ಜತೆಗೆ ನಿಂತ ಸಂಗಾತಿಗಳದ್ದು. ಇಷ್ಟು ವರ್ಷ ನನ್ನೊಂದಿಗೆ ಹೆಜ್ಜೆ ಹಾಕಿದ ನಿಮ್ಮದು, ನನ್ನದು ಮರಳುದಂಡೆಯ ಕಣ ಮಾತ್ರದ್ದು. ಸಹಕಾರ ನೀಡಿದ ಎಲ್ಲರಿಗೂ ದೀರ್ಘದಂಡ.

ಹೊಸ ಸಂಪಾದಕರು ನಿವೃತ್ತ ಮುಖ್ಯೋಪಾಧ್ಯಾಯರು, ಕನ್ನಡ ವಿದ್ವಾಂಸರು, ಪತ್ರಿಕೆಗೆ ಇನ್ನೂ ಅಂದ ಚಂದದ ಉಡಿಗೆ ತೊಡಿಗೆ ತೊಡಿಸುವ ಸಾಮರ್ಥ್ಯವುಳ್ಳವರು ಅವರಿಗೆ ಹಾರ್ದಿಕ ಸ್ವಾಗತ ಕೋರುತ್ತ, ನನಗೆ ವಿದಾಯ ಹೇಳಿ ಎಂದು ಪ್ರಾರ್ಥಿಸುವೆ.

ನಿಮ್ಮೆಲ್ಲರಿಗೂ ಬರಲಿರುವ ಹೊಸ ವರುಷ ಶ್ರೀ ವಿಜಯ ಸಂವತ್ಸರದ ಹಾರ್ದಿಕ ಶುಭಕಾಮನೆಗಳು.

ಇಂತು ನಿಮ್ಮ ವಿಶ್ವಾಸಿ

ಎಚ್ಚೆನ್ನಾರ್

# ವಿವೇಕ ವಾಣಿ




ಮಾನವನ ಸ್ವಭಾವದಲ್ಲಿರುವ ಎಲ್ಲಾ ಶಕ್ತವಾದುದು, ಒಳಿತಾದುದು ಮತ್ತು ಸಮರ್ಥವಾದುದು ಈ ದಿವ್ಯತೆಯಿಂದಲೇ ಬಂದುದಾಗಿದೆ. ಬಹುತೇಕ ಜನರಲ್ಲಿ ಇದು ಅಡಗಿರುತ್ತದೆ. ಆದರೂ ಸಾರಭೂತವಾಗಿ, ಒಬ್ಬ ವ್ಯಕ್ತಿ ಮತ್ತು ಇನ್ನೊಬ್ಬ ವ್ಯಕ್ತಿಯಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಏಕೆಂದರೆ ಎಲ್ಲರೂ ದಿವ್ಯಸ್ವರೂಪರೇ ಆಗಿದ್ದಾರೆ.

# ಪರಿವಿಡಿ


- ಪ್ರವಾಸ ಕಥನ 3
- ಸುಖದ ಬೆನ್ನು ಹತ್ತಿದಾಗ... 4
- ನೈಜ ಶಿಕ್ಷಣ ಹೀಗಿರಬಹುದೇ ? 5
- ಆನಂದಿಬಾಯಿ ಜೋಶಿ 6
- ರಾಷ್ಟ್ರೀಯ ಕಾರ್ಯಕಾರಿಣಿ ಸಭೆ 7
- ಎಬಿಆರ್‌ಎಸ್‌ಎಂ ಬೇಡಿಕೆಗಳು 9
- ಶಿಕ್ಷಕರೇ ಗಮನಿಸಿ... 10

# ಪ್ರವಾಸ ಕಥನ

■ ಎಚ್ಚೆನ್ನಾರ್

ಫೆಬ್ರವರಿ 24ರ ಭಾನುವಾರ ಮಧ್ಯಾಹ್ನ ಜಲಗಾಂವ್‌ನಲ್ಲಿ ಎಬಿಆರ್‌ಎಸ್‌ಎಂ ಸಭೆ ಮುಗಿಸಿದ ನಂತರ ಶ್ರೀ ಕೃ. ನರಹರಿಯವರ ನೇತೃತ್ವದಲ್ಲಿ ನಾನು, ಬಾಲಕೃಷ್ಣ ಭಟ್ಟರು, ಕೃಷ್ಣಮೂರ್ತಿ ಮತ್ತು ಶಿವಾನಂದ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಘೃಷ್ಣೇಶ್ವರ ಮತ್ತು ಅದರ ಸನಿಹದಲ್ಲೇ ಇರುವ ಎಲ್ಲೋರಾ ಗುಹಾಂತರ್ಗತ ದೇಗುಲಗಳ ವೀಕ್ಷಣೆಗೆ ಹೊರಟೆವು.

ಜಲಗಾಂವ್‌ನಿಂದ 160 ಕಿ. ಮೀ. ದೂರದಲ್ಲಿರುವ ಔರಂಗಾಬಾದ್‌ಗೆ ಭಾನುವಾರ ಸಂಜೆ 4ಕ್ಕೆ ಬಸ್‌ನಲ್ಲಿ ಹೊರಟು, ತಲುಪಿದಾಗ ರಾತ್ರಿ 8 ಗಂಟೆ ಕಳೆದಿತ್ತು. ಅಂದಿನ ರಾತ್ರಿ ಅಲ್ಲೇ ವಿಶ್ರಮಿಸಿ ಬೆಳಗಿನ 6.30ಕ್ಕೆ ಒಂದು ಕಾರನ್ನು ಬಾಡಿಗೆಗೆ ಪಡೆದು ಔರಂಗಾಬಾದ್‌ನ ಕೋಟೆಕೊತ್ತಲಗಳನ್ನು ಕಾರಿನಿಂದಲೇ ವೀಕ್ಷಿಸಿದೆವು. ಅಲ್ಲಿಂದ ಮುಂದೆ ಸ್ವಲ್ಪ ಹತ್ತಿರದಲ್ಲೇ ಇರುವ ಖ್ಯಾತ ಆಂಜನೇಯನ ದೇಗುಲವನ್ನು ಸಂದರ್ಶಿಸಿದೆವು. ಇದರ ವಿಶೇಷವೆಂದರೆ, ಸಾಮಾನ್ಯವಾಗಿ ಎಲ್ಲೆಡೆ ಆಂಜನೇಯನ ಮೂರ್ತಿ ನಿಂತಿದ್ದರೆ ಇಲ್ಲಿ ಮಾತ್ರ ಮೈತುಂಬ ಕೇಸರಿ ಬಣ್ಣ ಬಳಿದುಕೊಂಡು ಮಲಗಿದ್ದಾನೆ. ಈ ಭವ್ಯ ದೇಗುಲವನ್ನು ವೀಕ್ಷಿಸಿ ಹನುಮಂತನಿಗೆ ಪೂಜೆ ಸಲ್ಲಿಸಿ ಮುಂದೆ ಹೊರಟೆವು. ಈ ಔರಂಗಾಬಾದೇ ಹಿಂದಿನ ದೇವಗಿರಿ. ದೇವಗಿರಿ ಎಂದಾಗ ಥಟ್ಟನೇ ನೆನಪಿಗೆ ಬಂದದ್ದು ಚರಿತ್ರೆಯಲ್ಲಿ ಬಾಲ್ಯದಲ್ಲಿ ಓದಿದ್ದ ತೊಘಲಕ್ ದರ್ಬಾರ್ ಬಗ್ಗೆ. ಐಲು ದೊರೆ, ಹುಚ್ಚು ದೊರೆ ಎಂದು ಕರೆಸಿಕೊಂಡಿದ್ದ ಮಹಮದ್‌ಬಿನ್ ತೊಘಲಕ್ ತನ್ನ ರಾಜಧಾನಿಯನ್ನು ದೆಹಲಿಯಿಂದ ಇದೇ ದೇವಗಿರಿಗೆ ಮತ್ತೆ ದೆಹಲಿಗೆ ವರ್ಗಾಯಿಸಿದ್ದ. ಅವನು ಕಟ್ಟಿದ್ದ ದೌಲತಾಬಾದ್ ಶಿಥಿಲ ಕೋಟೆಯನ್ನು ದೂರದಿಂದ ನೋಡಿದ್ದಷ್ಟೇ. ಮತ್ತೆ ಖ್ಯಾತ ಎಲ್ಲೋರಾದಿಂದ ಅರ್ಧ ಮೈಲಿ ದೂರ ಇರುವ ವೆರೋಳ್ ಗ್ರಾಮ ತಲುಪಿದೆವು. ಇಲ್ಲೇ 12ನೇ ಜ್ಯೋತಿರ್ಲಿಂಗ ಘೃಷ್ಣೇಶ್ವರನ ಸುಂದರ ದೇವಸ್ಥಾನ ಇರುವುದು. ಇಲ್ಲಿ ಘೃಷ್ಣೇಶ್ವರನಿಗೆ ಹಾಲಭಿಷೇಕ ಮಾಡಿಸಿ ದೇಗುಲವನ್ನು ಕಣ್ತುಂಬಿಸಿಕೊಂಡು ಎಲ್ಲೋರಾ ಕಡೆ ನಡೆದೆವು.

ಕನ್ನಡದಲ್ಲಿ 'ಎಲ್ಲೂರು'', ಮರಾಠಿಯಲ್ಲಿ 'ವೆರೂಳ್' ಇಂಗ್ಲೀಷಿನವರ ಬಾಯಲ್ಲಿ 'ಎಲ್ಲೋರಾ' ಆದದ್ದು ಇತಿಹಾಸದ ದುರಂತ. ಮಹಾರಾಷ್ಟ್ರದ ಔರಂಗಾಬಾದ್‌ನಿಂದ ಕೇವಲ 29 ಕಿ.ಮೀ. ದೂರದಲ್ಲಿರುವ ಈ ಗುಹಾಂತರ್ಗತ ದೇಗುಲಗಳನ್ನು ನಿರ್ಮಿಸಿದವರು ಕನ್ನಡ ನಾಡಿನ ಸುಪ್ರಸಿದ್ಧ ದೊರೆಗಳಾದ ರಾಷ್ಟ್ರಕೂಟರು. ಇಲ್ಲಿರುವ 34 ಗುಹೆಗಳನ್ನು ಮೂರು ಭಾಗ ಮಾಡಬಹುದು. ಮೊದಲ ಭಾಗ ಬೌದ್ಧ ಗುಹೆಗಳು, ಎರಡನೇ ಭಾಗ ಹಿಂದೂ ದೇವ–ದೇವತೆಯರ ಗುಹೆಗಳು ಮತ್ತು ಕೊನೆಯದಾಗಿ ಜೈನ ಗುಹೆಗಳು.

ಬೌದ್ಧ ಗುಹೆಗಳ ನಿರ್ಮಾಣ ಕಾಲ 4 ರಿಂದ 6ನೇ ಶತಮಾನ. ಇದೆಲ್ಲ ಬಹುತೇಕ ಬೌದ್ಧ ವಿಹಾರಗಳು. ಇದರಲ್ಲಿ ಗೌತಮ ಬುದ್ಧ, ಬೋಧಿಸತ್ವರು ಮತ್ತು ಅನೇಕ ಸಂತರ ವಿಗ್ರಹಗಳನ್ನು ಕಡೆದು ಇರಿಸಲಾಗಿದೆ.

ಹಿಂದೂ ಗುಹೆಗಳು 6ನೇ ಶತಮಾನದ ಮಧ್ಯಕಾಲದಿಂದ 8ನೇ ಶತಮಾನದವರೆಗೆ ಕಡೆಯಲ್ಪಟ್ಟಿದೆ. ಇಲ್ಲಿರುವ ಹದಿಮೂರೂ ಗುಹೆಗಳನ್ನು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿಸಿದ್ದು. ಹಲವು ಪೀಳಿಗೆಗಳ ರಾಜರು, ಶಿಲ್ಪಿಗಳ ಅಖಂಡ ಪರಿಶ್ರಮದಿಂದ ಈ ಖ್ಯಾತ ಶ್ವೇತಶಿಲಾ ಗುಹಾಂತರ್ಗತ ದೇಗುಲಗಳು ನಿರ್ಮಾಣಗೊಂಡಿವೆ.

ಜೈನ ಗುಹೆಗಳು 9 ಮತ್ತು 10ನೇ ಶತಮಾನದ ನಿರ್ಮಿತಿ. ಈ ಎಲ್ಲವೂ ದಿಗಂಬರ ಪಂಥದ ತತ್ವಜ್ಞಾನವನ್ನು ಪ್ರತಿಬಿಂಬಿಸುತ್ತವೆ. ಇವುಗಳಲ್ಲಿ ಪ್ರಸಿದ್ಧವಾದದ್ದು 30ನೇ ಗುಹೆ ಚೋಟಾ ಕೈಲಾಸ್ ಮತ್ತು 32ನೇ ಗುಹೆ ಇಂದ್ರಸಭೆ.

ಪ್ರತಿ ಗುಹೆಯೂ ಸುಂದರ, ಅವರ್ಣನೀಯ. ಶಿಲಾಖಂಡಗಳನ್ನು ಕೊರೆದು ವಿಶಾಲ ಗುಹೆಗಳನ್ನು ನಿರ್ಮಿಸಿ, ಅದರಲ್ಲಿ ದೇವ–ದೇವತೆಗಳನ್ನು ಕೆತ್ತಿರುವುದು ಅಭೂತಪೂರ್ವ. ಅದರಲ್ಲೂ ಗೋಡೆಗಳಲ್ಲಿ ಹಾಗೂ ಮೇಲ್ಚಾವಣಿಯಲ್ಲಿ ಬರೆದಿರುವ ಚಿತ್ರಕಲೆಯಂತೂ, ಕಾಲದ ಪ್ರವಾಹಕ್ಕೆ ಸಿಲುಕಿಯೂ ಅಲ್ಪಸ್ವಲ್ಪ ಉಳಿದಿರುವುದು ಆಶ್ಚರ್ಯ–ಪರಮಾಶ್ಚರ್ಯ.

ಇದನ್ನು ನೋಡಿ ಬಂದಾಗ ನಮ್ಮ ಪೂರ್ವಜರ ಸೌಂದರ್ಯ ಪ್ರಜ್ಞೆ, ಕಲಾಸಕ್ತಿ, ದೈವಭಕ್ತಿ, ಕಲಾಪ್ರೌಢಿಮೆಗಳ ಬಗ್ಗೆ ಹೆಮ್ಮೆ ಮೂಡುತ್ತದೆ. ದುರಂತವೆಂದರೆ ಸೌಂದರ್ಯಪ್ರಜ್ಞೆ ಇಲ್ಲದ ಆ ಕಾಲದ ಅನಾಗರೀಕ ಮುಸಲ್ಮಾನ ದಾಳಿಕೋರರು ಎಲ್ಲಾ ಶಿಲ್ಪಗಳನ್ನು ಭಗ್ನಗೊಳಿಸಿರುವುದು ಕಣ್ಣಲ್ಲಿ ನೀರು ಬರಿಸಿ ಹೃದಯವನ್ನು ಘಾಸಿಗೊಳಿಸುತ್ತದೆ. ●

ಅಧ್ಯಕ್ಷರ ಫ್ಯಾಕ್ಸ್‌ನಿಂದ.........

ಕೆ. ಬಾಲಕೃಷ್ಣ ಭಟ್, Ex. MLC, ಅಧ್ಯಕ್ಷರು, ಶಿಕ್ಷಕ ಸಂಘ

# ಸುಖದ ಬೆನ್ನು ಹತ್ತಿದಾಗ ...

ಪ್ರತಿಯೊಬ್ಬ ವ್ಯಕ್ತಿಯೂ ಸಹಜವಾಗಿ ಸುಖದ ಕನಸನ್ನು ಕಾಣುತ್ತಿರುತ್ತಾನೆ. ಸುಖವೆಂದರೆ ಏನು ಎಂಬ ಪೂರ್ಣ ಕಲ್ಪನೆಯಿಲ್ಲದಿದ್ದರೂ ತನ್ನ ಕಲ್ಪನೆಯ ಸುಖಕ್ಕೆ ಹಾತೊರೆಯುತ್ತಿರುತ್ತಾನೆ. ತನ್ನ ಬಳಿ ಇಲ್ಲದ ವಸ್ತುಗಳನ್ನು ಪಟ್ಟಿ ಮಾಡಿ ಅವುಗಳನ್ನು ಸಂಪಾದಿಸಿ ಅದರಿಂದ ಸುಖ ಪಡೆಯುವ ಯತ್ನದಲ್ಲಿರುತ್ತಾನೆ. ವಸ್ತುಗಳನ್ನು ಮಾಡುತ್ತ ಹೋದರೆ ಅದಕ್ಕೆ ಮಿತಿಯಿಲ್ಲಎಂಬುದನ್ನು ತಿಳಿದೂ ಅದರೆಡೆಗೆ ಯತ್ನ ಮುಂದುವರೆಸುತ್ತಾನೆ. ಬಾಹ್ಯಪ್ರಪಂಚದ ಯಾವುದೇ ವಸ್ತು ತಕ್ಷಣದ ತೃಪ್ತಿ, ತಾತ್ಕಾಲಿಕ ಸುಖ ನೀಡಬಹುದೇ ವಿನಹ ಶಾಶ್ವತ ಸುಖನೀಡಲಾರದು. ನೀರಡಿಕೆಯಾದವನಿಗೆ ಒಂದು ಗುಟುಕು ನೀರೇ ಸುಖನೀಡಬಹುದಷ್ಟೇ. ಸ್ವಲ್ಪ ಕಳೆದರೆ ಮತ್ತೆ ನೀರಡಿಕೆ. ಬಾಯಾರಿಕೆ ನಿವಾರಣೆಯಾದೊಡನೆ ದೇಹ ಹಸಿವಿನ ಬೇಡಿಕೆಯನ್ನು ಮುಂದೊಡ್ಡುತ್ತದೆ. ಬಾಯಾರಿಕೆ ತಣಿಸಲು ನೀರಿನಿಂದ ಮಾತ್ರ ಸಾಧ್ಯ ಎಂದು ಗೊತ್ತಿದ್ದರೂ ಸಿಹಿಯಾದ, ತಂಪಾದ ಇತರ ಪೇಯಗಳಿಂದ ತೃಷ್ಣೆಯನ್ನು ನೀಗಿಸಿಕೊಳ್ಳಲು ತೊಡಗುತ್ತೇವೆ. ಸಿಹಿಯಿಂದ ಮತ್ತಷ್ಟು ನೀರು ಕುಡಿಯುವಂತಾಗುವುದಲ್ಲದೆ ಮೂಲತ: ಇರುವ ನೀರಡಿಕೆ ನೀಗುವುದಿಲ್ಲ. ತಂಪು ಪಾನೀಯ ಕುಡಿದರೆ ತೃಷೆಯ ತಾತ್ಕಾಲಿಕ ಶಮವಾಗುವುದಲ್ಲದೆ ದೇಹದಲ್ಲಿನ ಜೀವದ್ರವದ ಕೊರತೆ ನೀಗುವುದಿಲ್ಲ. ತೃಷೆಯ ಶಮನದ ಅನುಭವವೇ ತಾತ್ಕಾಲಿಕ ಸುಖ ಎನಿಸಲ್ಪಡುತ್ತದೆ.

ಹಸಿವು ಮತ್ತು ನೀರಡಿಕೆಗಳ ಶಮನ ಕೆಲವೇ ನಿಮಿಷಗಳ, ಘಂಟೆಗಳ ಸುಖ ನೀಡಬಲ್ಲುದು. ಕ್ಷುಧೆ ಅಥವಾ ಹಸಿವಿನ ಶಮನ ಕೇವಲ ತಾತ್ಕಾಲಿಕ. ಹಸಿವನ್ನು ನೀಗಿಸಲು ಅನ್ನದಿಂದಲೇ ಸಾಧ್ಯ ತಾನೇ! ಅನ್ನವೆಂದರೆ ಅಕ್ಕಿಯಿಂದ ಬರುವ ಅನ್ನ ಮಾತ್ರವಲ್ಲ. ಯಾವುದೇ ಭೋಜ್ಯ ವಸ್ತು ಹಸಿವನ್ನು ನೀಗಬಲ್ಲುದು. ಮತ್ತೆ ಒಂದೇ ವಸ್ತು, ಒಂದೇ ರುಚಿ ಬಹಳ ದಿನ ಸುಭೋಜ್ಯವಾಗಲಾರದು. ಒಟ್ಟಿನಲ್ಲಿ ನೀರು, ಮತ್ತು ಆಹಾರ ದೇಹದ ಅತ್ಯಂತ ಅಗತ್ಯದ ಎರಡು ವಸ್ತುಗಳು ಎನ್ನಲಡ್ಡಿಯಿಲ್ಲ. ಅವಿಲ್ಲದೆ ಬದುಕಿಲ್ಲ ಎನ್ನಬಹುದಷ್ಟೆ.

ಆದರೆ ವ್ಯಕ್ತಿಗೆ ಅವೆರಡು ದೊರೆತ ಮೇಲೆ ಇನ್ನೇನೋ ವಸ್ತುಗಳು 'ಸುಖ' ನೀಡಬಹುದು ಎಂದೆಣಿಸಿ ಅದರ ಬೆನ್ನು ಹತ್ತಿ ಹೋಗುವುದನ್ನು ಕಾಣುತ್ತೇವೆ. ಅದನ್ನೇ ಆಚಾರ್ಯ ಶಂಕರರು ಎಷ್ಟು ಸೊಗಸಾಗಿ ಹೇಳಿದ್ದಾರೆ ನೋಡಿ.–

**"ಬಾಲಸ್ತಾವತ್ ಕ್ರೀಡಾಸಕ್ತಃ**
**ತರುಣಸ್ತಾವತ್ ತರುಣೀರಕ್ತಃ ।**
**ವೃದ್ಧಸ್ತಾವತ್ ಚಿಂತಾಮಗ್ನಃ**
**ಪರೇ ಬ್ರಹ್ಮಣಿಕೋಪಿನಲಗ್ನಃ ॥**

ಪ್ರಪಂಚದಲ್ಲಿ ಜನ ಐಹಿಕ ಸುಖದ ಬೆನ್ನು ಹತ್ತಿ ಹೋಗುವುದಲ್ಲದೆ ಶಾಶ್ವತ ಸುಖನೀಡುವ, ನಿತ್ಯಸತ್ಯವಾದ ಆ ಪರತತ್ವ – ಪರಬ್ರಹ್ಮನ ಕುರಿತು ಯಾರೂ ಚಿಂತಿಸುವುದಿಲ್ಲ ಎನ್ನುತ್ತಾರೆ ಅವರು.

ಮಗುವಿಗೆ ಕ್ರೀಡೆ ಖುಷಿಕೊಟ್ಟರೆ ತರುಣನಿಗೆ ತರುಣಿಯ ಸಾಮಿಪ್ಯ ಮುದ ನೀಡುವುದು. ವೃದ್ಧರು ಚಿಂತೆಯಲ್ಲೇ ಮಗ್ನರಾಗಿ ಕಾಲಕಳೆಯುತ್ತಾರಲ್ಲದೆ ಆ ಪರಬ್ರಹ್ಮನಲ್ಲಿ ಯಾರೂ ಅನುರಕ್ತರಾಗಿಲ್ಲ – ಎಂದು.

ವ್ಯಕ್ತಿ ವಿವಿಧ ವಿಷಯಾಸಕ್ತನಾಗಿ ಅದರಿಂದ ಸುಖಸಿಗಬಹುದೆಂದು ಭ್ರಮಿಸಿ ಅದಕ್ಕಾಗಿ ಶ್ರಮಿಸುತ್ತಾನೆ. ನಿಜವಾದ ಸುಖವಿರುವುದು ವಸ್ತು–ವಿಷಯಗಳಲ್ಲಿ ಅಲ್ಲ. ಅಧ್ಯಾತ್ಮತತ್ವದಲ್ಲೇ ನಿಜವಾದ ಸುಖವಿದೆ ಎನ್ನುತ್ತಾವೆ ಶಾಸ್ತ್ರಗ್ರಂಥಗಳು. ವಿರಕ್ತಿ ಅಥವಾ ವೈರಾಗ್ಯಕ್ಕಿಂತ ಮಿಗಿಲಾದ ಸುಖ ಇನ್ನಾವುದರಲ್ಲಿದೆ? ಎಂದು ಪ್ರಶ್ನಿಸುತ್ತಾರೆ ಶಂಕರಾಚಾರ್ಯರು.

**"ಮೂಢಜಹೀಹಿ ಧನಾಗಮತೃಷ್ಣಾಂ**
**ಕುರು ಸದ್ಬುದ್ಧಿಂ ಮನಸಿವಿತೃಷ್ಣಾಮ್"**

ಎಲೈ ಮೂಢನೇ, ಅತಿಯಾದ ಹಣ ಸಂಪಾದನೆಯ ಆಸೆ ಬೇಡು. ಮನಸ್ಸಿನಲ್ಲಿ ವಿತೃಷ್ಣೆ ಅಂದರೆ ವೈರಾಗ್ಯವನ್ನು ಬೆಳೆಸಿಕೋ.

(ಪುಟ 7ಕ್ಕೆ....)

# ನೈಜ ಶಿಕ್ಷಣ ಹೀಗಿರಬಹುದೇ...

■ ಶ್ವೇತಾದ್ರಿ

"ವಿದ್ಯೆ ಉಳ್ಳವನ ಮುಖವು ಮುದ್ದು ಬರುವಂತಿಕ್ಕು; ವಿದ್ಯೆ ಇಲ್ಲದವನ ಮುಖವು ಹಾಳೂರ ಹದ್ದಿನಂತಿಕ್ಕು"– ಸರ್ವಜ್ಞನ ಈ ನುಡಿ ವಿದ್ಯಾವಂತನಲ್ಲಿರುವ ತೇಜಸ್ಸು, ಕಾಂತಿ ಹೊಳಪುಗಳ ಬಗ್ಗೆ ತಿಳಿಸುವುದಲ್ಲದೆ ವ್ಯಕ್ತಿಗೆ ವಿದ್ಯೆಯ ಅಗತ್ಯ ಹಾಗೂ ವಿದ್ಯೆಯ ಮಹತ್ವವನ್ನು ತಿಳಿಸುತ್ತದೆ. ವಿದ್ಯೆಯನ್ನು ಪ್ರಾಚೀನ ಭಾರತೀಯರು 'ಅಪರ ವಿದ್ಯೆ', ಪರಾವಿದ್ಯೆ ಎಂದು ಎರಡು ರೀತಿಯಲ್ಲಿ ಗುರುತಿಸಿದ್ದರು. 'ಅಪರಾವಿದ್ಯೆ' ಲೌಕಿಕ ಜ್ಞಾನಕ್ಕೆ ಬೇಕಾದ ಜ್ಞಾನವನ್ನು ವ್ಯಕ್ತಿಗೆ ನೀಡುತ್ತಿತ್ತು.

ಸ್ವಾಮಿ ವಿವೇಕಾನಂದರು ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಶಿಕ್ಷಣವೇ ರಾಮಬಾಣ ಎಂಬ ನಿತ್ಯ ಸತ್ಯವನ್ನು ಪ್ರತಿಪಾದಿಸಿದರು. ಅವರು ಹೀಗೆ ಹೇಳುತ್ತಾರೆ, 'ಯಾವ ಶಿಕ್ಷಣ ಜನ ಸಾಧಾರಣನನ್ನು ಜೀವನ ಸಂಗ್ರಾಮಕ್ಕೆ ಸಮರ್ಥರನ್ನಾಗಿ ಮಾಡುವುದಕ್ಕಾಗುವುದಿಲ್ಲವೋ, ಯಾವುದು ಮನುಷ್ಯನಿಗೆ ಚಾರಿತ್ರ್ಯಬಲ, ಸೇವಾತತ್ಪರತೆ, ಸಿಂಹಸಾಕಸೀಕತೆ ಇವುಗಳನ್ನು ಒದಗಿಸುವುದಿಲ್ಲವೊ ಅದು ಶಿಕ್ಷಣ ಎಂಬ ಹೆಸರಿಗೆ ಯೋಗ್ಯವೇನು? ಜೀವನದಲ್ಲಿ ವ್ಯಕ್ತಿ ತನ್ನ ಕಾಲಿನ ಮೇಲೆ ತಾನು ತಾನು ನಿಂತುಕೊಳ್ಳುವ ಸಾಮರ್ಥ್ಯವನ್ನು ಯಾವುದು ನೀಡುವುದೋ ಅದೇ ನಿಜವಾದ ಶಿಕ್ಷಣ. ಇದುವೇ ಮಾನವ ನಿರ್ಮಾಣ ಶಿಕ್ಷಣ'.

**ಈ ರೀತಿಯ ಶಿಕ್ಷಣವನ್ನು ಹೇಗೆ ನೀಡುವುದು?**

ಸ್ವಾಮಿಜೀಯವರ ಪ್ರಕಾರ 'ವಿದ್ಯಾಭಾಸವೆಂದರೆ ಮಾನವನಲ್ಲಿ ಈಗಾಗಲೇ ಅಡಗಿರುವ ಪರಿಪೂರ್ಣತೆಯ ಪ್ರಕಟಣೆ' ಇದರ ಪ್ರಕಾರ ಒಂದು ಮಗು ಜಡವಸ್ತುವಲ್ಲ. ಆದ್ದರಿಂದ ಅದರ ಮನಸ್ಸು ಖಾಲಿ ಎಂದು ಪರಿಗಣಿಸಬಾರದು. ಒಂದು ಗಿಡವನ್ನು ಬೆಳೆಸಲು ನಾವೇನು ಮಾಡಬಹುದು? ನೀರು ಮತ್ತು ಗೊಬ್ಬರವನ್ನು ಅದರ ಬೇರಿಗೆ ಒದಗಿಸಬಹುದು. ಆದರೆ ಗಿಡವು ಅದನ್ನು ಹೀರಿಕೊಂಡು ತಾನೇ ಬೆಳೆಯಬೇಕಾಗುತ್ತದೆ. ಹಾಗೇಯೇ ಒಂದು ಮಗುವೂ ತನ್ನ ಸುತ್ತಲ ವಾತಾವರಣದಿಂದ ಸಂಸ್ಕಾರಗಳನ್ನು, ಸಂವೇದನೆಗಳನ್ನು ಸ್ವೀಕರಿಸಿ ಬೆಳೆಯುವ ಸಾಧ್ಯತೆಗಳನ್ನು ಪಡೆದುಕೊಂಡು ಇರುತ್ತದೆ. ಈ ಹುಟ್ಟು ಗುಣಗಳು ವ್ಯಕ್ತಿಯ ಸಾಮರ್ಥ್ಯ ಮತ್ತು ಪ್ರತಿಭೆಗಳನ್ನು ಹೊರಗೆ ತರುತ್ತದೆ.

ವಿದಾರ್ಥಿ ತನಗೆ ತಾನೇ ಕಲಿತುಕೊಳ್ಳುತ್ತಾನೆ. ತನ್ನ ಮಾರ್ಗದಲ್ಲಿ ವಿದ್ಯಾರ್ಥಿ ಸಾಗುವುದಕ್ಕೆ ಶಿಕ್ಷಕರು ಸಹಾಯ ಮಾಡುಬಹುದು. ಶಿಕ್ಷಣ ವಿದ್ಯಾರ್ಥಿ ಸರಿಯಾದ ದಿಕ್ಕಿನಲ್ಲಿ ಹೋಗುವಂತೆ ಮಾರ್ಗದರ್ಶನ ಮಾಡುವಂತಿರಬೇಕು. ನಾವು ನೀಡುವ ಶಿಕ್ಷಣ ಕೇವಲ ಮಾಹಿತಿಗಳ ಮೊತ್ತವಾಗಬಾರದು. ವಿವೇಕಾನಂದರು ಹೇಳುವಂತೆ 'ಜೀವನವನ್ನು ನಿರ್ಮಾಣಮಾಡುವಂತಹ, ಪುರುಷಸಿಂಹರನ್ನಾಗಿ ಮಾಡುವಂತಹ, ಶೀಲಸಂಪತ್ತಿಗೆ ಸಹಾಯ ಮಾಡುವಂತಹ ವಿಚಾರಗಳನ್ನು ನಾವು ಮೈಗೂಡಿಸಿಕೊಳ್ಳಬೇಕಾದ ಶಿಕ್ಷಣವನ್ನು ನಾವು ಕೊಡಬೇಕು.'

ನಾವು ಶಿಕ್ಷಕರು ಈಗಿನ ಶಿಕ್ಷಣ ಪದ್ಧತಿಯಲ್ಲಿ ಇಂತಹ ಶಿಕ್ಷಣವನ್ನು ನೀಡಲು ಸಾಧ್ಯವಾಗುತ್ತಿದೆಯೇ? ನಾವು ಬೋಧಿಸುವ ವಿಷಯಗಳಲ್ಲಿ ವರ್ಷದಲ್ಲಿ ನಿಗದಿ ಪಡಿಸಿರುವ ಪಠ್ಯವನ್ನು ಪಾಠ ಮಾಡುವುದಕ್ಕೇ ಸಮಯ ಸಾಕಾಗುವುದಿಲ್ಲ. ಇನ್ನೂ ವಿವೇಕಾನಂದರು ಹೇಳುವಂತಹ ಜೀವನ ನಿರ್ಮಾಣ ಮಾಡುವ, ಪುರುಷಸಿಂಹರನ್ನು ಮಾಡುವ ಶಿಕ್ಷಣ ಹೇಗೆ ಯಾವಾಗ ನೀಡುವುದು? ಎಂಬ ವಿಚಾರ ನಮಗೆ ಕಾಡುತ್ತದೆ. ಮನಸ್ಸಿದ್ದರೆ ಮಾರ್ಗ. ನಮ್ಮ ಪ್ರತಿನಿತ್ಯದ ತರಗತಿಗಳಲ್ಲಿ ಐದು ನಿಮಿಷ ಈ ರೀತಿಯ ವಿಚಾರಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುತ್ತಾ ಬಂದರೆ ಸಮಾಜಮುಖೀ ಶಿಕ್ಷಣವನ್ನು ಪ್ರಯತ್ನ ಮಾಡಬಹುದಲ್ಲವೇ?

●


**ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ ಪತ್ರಿಕೆಯ ಪ್ರಾರೂಪ**

(ಪ್ರಾರೂಪ 8, ವಿಧಿ 8)

| | |
|---|---|
| ಪ್ರಕಟಣೆಯ ಸ್ಥಳ | : ನಂ. 55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು–560 020 |
| ಪ್ರಕಾಶಕ | : **ಕೃ. ನರಹರಿ** ನಂ. 55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು–560 020 |
| ಮಾಲೀಕತ್ವ | : **ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.)** ನಂ. 55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು–560 020 |
| ಸಂಪಾದಕ | : **ಕೃ. ನರಹರಿ** (ಮೇಲಿನದೇ ವಿಳಾಸ) |
| ಭಾರತದ ಪ್ರಜೆಯೇ | : ಹೌದು |
| ಮುದ್ರಕ | : **ರಾಷ್ಟ್ರೋತ್ಥಾನ ಮುದ್ರಣಾಲಯ,** ಬೆಂಗಳೂರು – 560 019 |

ಮೇಲೆ ಕೊಟ್ಟಿರುವ ವಿಷಯಗಳು ನನ್ನ ನಂಬಿಕೆಯಲ್ಲಿ ಪೂರ್ಣ ಸತ್ಯವೆಂದು ನಾನು ಕೃ. ನರಹರಿ ಘೋಷಿಸುತ್ತೇನೆ.

ಬೆಂಗಳೂರು **(ಸಹಿ) ಕೃ. ನರಹರಿ**

1.3.2013 ಪ್ರಕಾಶಕ

**ಮಹಿಳಾ ದಿನಾಚರಣೆಗಾಗಿ ವಿಶೇಷ ಲೇಖನ**

# ಆನಂದಿಬಾಯಿ ಜೋಷಿ

ಆನಂದಿಬಾಹಿ ಜೋಷಿಯವರು ಭಾರತದ ಪ್ರಥಮ ಮಹಿಳಾ ವೈದ್ಯರು, ಹಿಂದೂ ಬ್ರಾಹ್ಮಣ ಮಹಿಳೆ ವಿದೇಶಕ್ಕೆ ಹೋಗಿ ವೈದ್ಯಕೀಯ ಪದವಿ ಪಡೆದ ಪ್ರಪ್ರಥಮ ಮಹಿಳೆಯೂ ಹೌದು. ಯಮುನಾಬಾಯಿ 30–03–1865 ರಂದು ಮುಂಬಯಿಯ ಬಳಿಯಿರುವ ಕಲ್ಯಾಣದಲ್ಲಿ ಸಾಂಪ್ರದಾಯಿಕ ಶ್ರೀಮಂತ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಸಂಪ್ರದಾಯಕ್ಕೆ ಜೋತುಬಿದ್ದು ಯಮುನಾಬಾಯಿಗೆ 9 ವರ್ಷವಾದಾಗ, ಕಲ್ಯಾಣದ ಅಂಚೆ ಕಛೇರಿಯಲ್ಲಿ ಗುಮಾಸ್ತನಾದ 20 ವರ್ಷದ ಗೋಪಾಲರಾವ್ ಜೋಷಿ ಎನ್ನುವ ವಿಧುರನೊಂದಿಗೆ ವಿವಾಹವಾಯಿತು. ವಿವಾಹದ ನಂತರ ಯಮುನಾಬಾಯಿ ಆನಂದಿಬಾಯಿ ಜೋಷಿ ಆದರು.

ಗೋಪಾಲರಾವ್ ಜೋಷಿಯವರು ಮೊದಲಿನಿಂದ ಸಕಾರಾತ್ಮಕ ಆಲೋಚನೆಯನ್ನು ಹೊಂದಿದವರು, ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡಿದವರು, ವಿವಾಹದ ನಂತರವೂ ಪ್ರಪಂಚದಲ್ಲಿ ನಮ್ಮ ದೇಶವು ಇತರ ದೇಶಗಳಂತೆ ಅಭಿವೃದ್ಧಿ ಹೊಂದಬೇಕಾದರೆ ಮತ್ತು ಸಂಸಾರದಲ್ಲಿ ಸುಖ– ಶಾಂತಿ ಸಂಯಮವಿರಬೇಕಾದರೆ ಸ್ತ್ರೀಯರು ವಿದ್ಯಾವಂತರಾಗಬೇಕು. ಈ ಬದಲಾವಣೆ ಮೊದಲು ನಮ್ಮ ಮನೆಯಲ್ಲಿ ಪ್ರಾರಂಭವಾಗಲಿ ಎಂದು ಆಲೋಚಿಸಿ ತನ್ನ ಮಡದಿಯನ್ನು ವಿದ್ಯಾವಂತಳನ್ನಾಗಿಸುವುದಾಗಿ ನಿಶ್ಚಯಿಸಿದರು.

ಆನಂದಿಬಾಯಿ ತಮ್ಮ ಪತಿಯಿಂದ ಪಡೆದ ಭಾಷೆ, ಗಣಿತ ಮುಂತಾದ ವಿಷಯಗಳ ಪುಸ್ತಕಗಳನ್ನು ಅಭ್ಯಸಿಸಿ ವಿದ್ಯಾಭ್ಯಾಸ ಮುಂದುವರಿಸಿದರು. ಈ ಮಧ್ಯೆ ಜೋಷಿಯವರಿಗೆ ಕಲ್ಕತ್ತದ ಬಳಿ ಒಂದು ಊರಿಗೆ ವರ್ಗಾವಣೆ ಯಾಯಿತು. ವಿದ್ಯಾಭ್ಯಾಸಕ್ಕಾಗಿ ಗಂಡ ಎಷ್ಟೇ ಉತ್ತೇಜನ ನೀಡಿದರೂ ಮನೆಯ ಹಿರಿಯರಿಂದ ಅಕ್ಷೇಪ ವ್ಯಕ್ತವಾಗುತ್ತಿತ್ತು. ಆದರೆ ಆನಂದಿಬಾಯಿಯವರು "ಏಳಿ.. ಎದ್ದೇಳಿ! ಗುರಿ ಮುಟ್ಟುವ ತನಕ ನಿಲ್ಲದಿರಿ.. ಎಂಬ ವಿವೇಕಾನಂದರ ಧ್ಯೇಯ ವಾಕ್ಯದಂತೆ ತಮ್ಮ ಪ್ರಯತ್ನವನ್ನು ಮುಂದುವರಿಸಿ, ಮುಂದಿನ ಜೀವನಕ್ಕಾಗಿ ಆಂಗ್ಲ ಭಾಷೆಯನ್ನು ಕಲಿತರು.

ಆನಂದಿಬಾಯಿಯವರು 14ನೇ ವಯಸ್ಸಿನಲ್ಲಿ ಒಂದು ಗಂಡು ಮಗುವಿಗೆ ಜನ್ಮವಿತ್ತರು. ಆದರೆ ಸಕಾಲಕ್ಕೆ ಸರಿಯಾದ ವೈದ್ಯಕೀಯ ಚಿಕಿತ್ಸೆ ಸಿಗದೆ ಮಗು 10 ದಿನಕ್ಕೆ ಸಾವನ್ನಪ್ಪಿತು. ಈ ಘಟನೆ ಆನಂದಿಬಾಯಿಯವರ ಜೀವನದ ತಿರುವಿಗೆ ಕಾರಣವಾಯಿತು. ಕೊಲ್ಲಾಪುರದ ಮಿಷನ್ ಶಾಲೆಗೆ ಸೇರಿ ವಿದ್ಯಾಭ್ಯಾಸದ ಒಂದು ಹಂತ ತಲುಪಿದರು. ಆ ವೇಳೆಗಾಗಲೇ ಜೋಷಿಯವರು ವೈದ್ಯಕೀಯ ಶಿಕ್ಷಣಕ್ಕಾಗಿ ತಮ್ಮ ಪತ್ನಿಯನ್ನು ಅಮೇರಿಕಾಗೆ ಕಳುಹಿಸಲು ನಿರ್ಧರಿಸಿದ್ದರು. ಕ್ರಿ.ಶ. 1880 ರಲ್ಲಿ ಗಂಡನ ಪ್ರೋತ್ಸಾಹದಿಂದ ವೈದ್ಯಕೀಯ ಶಿಕ್ಷಣ ಮುಂದುವರೆಸಲು ಆಸಕ್ತಿ ತೋರಿದರು. ಆದರೆ ಇದಕ್ಕಾಗಿ ಅವರಲ್ಲಿ ಆರ್ಥಿಕ ಸೌಲಭ್ಯವಿರಲಿಲ್ಲ. ಅಮೆರಿಕಾದ ರಾಯಲ್ ರೈಡರ್ ಎಂಬ ಪ್ರತಿಷ್ಠಿತ ಮಿಷನರಿಗೆ ಜೋಷಿಯವರು ಆನಂದಿಬಾಯಿಯವರ ಉತ್ಸಾಹ, ಧ್ಯೇಯ, ಉದ್ದೇಶ ಮತ್ತು ಗುರಿ ಎಲ್ಲವನ್ನೂ ವಿವರಿಸಿ ಶಿಕ್ಷಣಕ್ಕೆ ಆರ್ಥಿಕ ನೆರವು ಹಾಗೂ ತಮಗೂ ಕೆಲಸಕ್ಕಾಗಿ ಪತ್ರ ಬರೆದರು. ಅದನ್ನು ಓದಿದ ವೆಲ್ಡರ್ ಸಂತೋಷಗೊಂಡರು. ಆದರೆ ದಂಪತಿಗಳು ಕ್ರೈಸ್ತ ಮತಕ್ಕೆ ಮತಾಂತರ ಹೊಂದಿದರೆ ಮಾತ್ರ ಸಹಾಯಹಸ್ತ ನೀಡುವುದಾಗಿ ತಿಳಿಸಿದರು. ಇದು ಜೋಷಿ ದಂಪತಿಗಳಿಗೆ ಇಷ್ಟವಾಗಲಿಲ್ಲ.

**ಭಾರತದ ಇತಿಹಾಸದ ಪುಟಗಳನ್ನು ತಿರುವಿ ನೋಡಿ, ಸಮಾಜ ಒಳ ಮತ್ತು ಹೊರಗಿನ ಆಕ್ರಮಣಗಳಿಂದ ತತ್ತರಿಸಿದಾಗ ಅದು ತನ್ನ ಅಸ್ತಿತ್ವವನೇ ಕಳೆದುಕೊಂಡು ಇತಿಹಾಸದ ಪುಟ ಸೇರುತ್ತವೆ. ಸಮಾಜದಲ್ಲಿ ಇಂತಹ ಪರಿಸ್ಥಿತಿ ಕಾಲ ಕಾಲಕ್ಕೆ ಬಂದರೂ ಸವಾಲಿಗೆ ಸೆಡ್ಡುಹೊಡೆದು ಸಮಾಜ ಮತ್ತೆ ಮತ್ತೆ ತಲೆಯೆತ್ತಿ ನಿಲ್ಲುತ್ತಿದೆ ಎಂದರೆ, ಇದಕ್ಕೆ ಕಾರಣ ಈ ಮಣ್ಣಿನಲ್ಲಿ ಕಾಲಕಾಲಕ್ಕೆ ಉದಯಿಸಿ ಬಂದ ಸಾಧಕರು ಮತ್ತು ಮಹಾತ್ಮರು. ಹೀಗೆ ಜನ್ಮತಾಳಿದ ಒಬ್ಬ ಸಾಧಕಿ ಆನಂದಿಬಾಹಿ ಜೋಷಿ**

ರಾಯಲ್ ವೆಲ್ಡರ್ ತಮ್ಮ ಒಂದು ಪತ್ರಿಕೆಯಲ್ಲಿ ಇದರ ಎಲ್ಲಾ ವಿವರಗಳನ್ನೂ ಪ್ರಕಟಿಸಿದ್ದರು. ನ್ಯೂಜರ್ಸಿಯ ನಿವಾಸಿ Theodicia ಎನ್ನುವ ಬಡಗಿ ಈ ಪ್ರಕಟಣೆಯನ್ನು ಓದಿ ಆನಂದಿಯನ್ನು ಸಂಪರ್ಕಿಸಿದರು. ಕ್ರಿ.ಶ. 1881 ರಿಂದ 1883 ರವರೆಗೆ ಹಿಂದೂ ಧರ್ಮ, ಸಂಪ್ರದಾಯಗಳು, ಹಬ್ಬ, ನೀಡಿದರು. ಇದೇ ಸಮಯದಲ್ಲಿ ಆನಂದಿ ಅನಾರೋಗ್ಯದಿಂದ ತತ್ತರಿಸುತ್ತಿರುವಾಗ Theodicia ರವರೇ ಅಮೇರಿಕಾದಿಂದ ಔಷಧಿ ಕಳುಹಿಸಿದರು. ಒಮ್ಮೆ ಕಷ್ಟ ಬಂದರೆ ಪದೇ ಪದೇ ಕಷ್ಟ ಬರುತ್ತಲೇ ಇರುತ್ತದೆ. ಎನ್ನುವ ಹಾಗೆ ಜೋಷಿಯವರಿಗೆ ಮತ್ತೊಂದು ಊರಿಗೆ ವರ್ಗಾವಣೆಯಾಯಿತು. ಈ ಕಾರಣದಿಂದ ಆನಂದಿಬಾಯಿ ಒಬ್ಬರನ್ನೇ ಅಮೇರಿಕಾಗೆ ವೈದ್ಯಕೀಯ ಶಿಕ್ಷಣಕ್ಕಾಗಿ ಕಳುಹಿಸಲು ತೀರ್ಮಾನಿಸಿದರು. ಆನಂದಿ ಸ್ವಲ್ಪ ಯೋಚಿಸುತ್ತಿರುವಾಗಲೆ ಜೋಷಿಯವರೆ ಸಮಾಧಾನದ ಮಾತುಗಳಿಂದ 'ಶಿಕ್ಷಣದಿಂದಲೇ ನೀವು ಸಮಾಜಕ್ಕೆ ಒಬ್ಬ ಉತ್ತಮ ಆದರ್ಶ ಮಹಿಳೆಯಾಗಲು ಸಾಧ್ಯ ಎಂದು ತಿಳಿಹೇಳಿದರು'.

(7ನೇ ಪುಟಕ್ಕೆ.....)

# ಜಲಗಾಂವ್‌ನಲ್ಲಿ ನಡೆದ ಎಬಿಆರ್‌ಎಸ್‌ಎಂನ ರಾಷ್ಟ್ರೀಯ ಕಾರ್ಯಕಾರಿಣಿ

ಫೆಬ್ರವರಿ 23, 24 ಶನಿವಾರ, ಭಾನುವಾರಗಳಂದು ಮಹಾರಾಷ್ಟ್ರದ ಜಲಗಾಂವ್ ನಗರದಲ್ಲಿ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ನಡೆಯಿತು. ಭಾರತದ 22 ಪ್ರಾಂತಗಳಿಂದ 75 ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು. 23 ರ ಬೆಳಿಗ್ಗೆ ಮಹಾರಾಷ್ಟ್ರ ವಿಧಾನಸಭೆಯ ವಿರೋಧ ಪಕ್ಷದ ನಾಯಕರಿಂದ ದೀಪ ಬೆಳಗಿಸುವುದರ ಮೂಲಕ ಸಭೆ ಉದ್ಘಾಟನೆಗೊಂಡಿತು. ವೇದಿಕೆಯಲ್ಲಿ ಮಹಾಸಂಘದ ಸಂರಕ್ಷಕರಾದ ಪ್ರೊ. ಕೃ. ನರಹರಿ, ಅಧ್ಯಕ್ಷರಾದ ಡಾ. ವಿಮಲ್ ಪ್ರಸಾದ್ ಅಗರ್‌ವಾಲ್, ಪ್ರಧಾನ ಕಾರ್ಯದರ್ಶಿ ಪ್ರೊ. ಜೆ. ಪಿ. ಸಿಂಘಲ್, ಸಹಪ್ರಧಾನ ಕಾರ್ಯದರ್ಶಿ ಪ್ರೊ. ಕೆ. ಬಾಲಕೃಷ್ಣ ಭಟ್‌ರವರು ಉಪಸ್ಥಿತರಿದ್ದರು.

ಸಭೆಯಲ್ಲಿ ವಿವಿಧ ರಾಜ್ಯಗಳಲ್ಲಿ ವಿವೇಕಾನಂದರ 150ನೇ ಜನ್ಮ ವರ್ಷಾಚರಣೆಯ ನಿಮಿತ್ತ ನಡೆಸಿದ 'ಸಮರ್ಥ ಭಾರತ' ಪರೀಕ್ಷೆ ನಡೆದ ಬಗ್ಗೆ ವರದಿಯನ್ನು ಕೊಡಲಾಯಿತು. ಇಡೀ ದೇಶದಲ್ಲಿ ಸುಮಾರು 25 ಲಕ್ಷ ವಿದ್ಯಾರ್ಥಿಗಳು ಈ ಪರೀಕ್ಷೆಯ ಮೂಲಕ ವಿವೇಕಾನಂದರ ಜೀವನ ಮತ್ತು ವಿಚಾರಗಳನ್ನು ತಿಳಿದುಕೊಂಡಿದ್ದಾರೆ ಎಂಬ ಆನಂದದ ಸಂಗತಿ ಎಲ್ಲರಿಗೂ ಸಂತೋಷವನ್ನುಂಟು ಮಾಡಿತು. ಇದರೊಂದಿಗೆ ಸಭೆಯಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿನ ಶೈಕ್ಷಣಿಕ ಸಮಸ್ಯೆಗಳು, ಶಿಕ್ಷಕರ ಸೇವಾ ಸ್ಥಿತಿಗಳನ್ನು ಚರ್ಚಿಸಿದ ನಂತರ ಬರಲಿರುವ ಏಪ್ರಿಲ್ 25 ರಂದು ದೇಶದ ಎಲ್ಲಾ ಶಿಕ್ಷಕರೂ ದೆಹಲಿಯ ಪಾರ್ಲಿಮೆಂಟ್ ಭವನದೆದುರು ಧರಣಿಯನ್ನು ಆಚರಿಸುವುದರ ಮೂಲಕ ಪ್ರತಿಭಟನಾ ಪ್ರದರ್ಶನವನ್ನು ನಡೆಸಬೇಕೆಂದು ನಿರ್ಧರಿಸಲಾಯಿತು. ಇದರ ಅಂಗವಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾದ ಬೇಡಿಕೆಗಳ ಪಟ್ಟಿಯನ್ನು ಎಲ್ಲ ಶಿಕ್ಷಕರ ಅವಗಾಹನೆಗಾಗಿ ಈ ಸಂಚಿಕೆಯಲ್ಲಿ ಮುದ್ರಿಸಿದೆ. ಧರಣಿಯಲ್ಲಿ ನಮ್ಮ ರಾಜ್ಯದಿಂದಲೂ ನೂರಾರು ಶಿಕ್ಷಕರು ಭಾಗವಹಿಸಬೇಕೆಂದು ಕರೆ ನೀಡಲು ಯೋಚಿಸಿದೆ. ●

6ನೇ ಪುಟದಿಂದ.....

**ಆನಂದಿಬಾಯಿ...**

ಅಮೇರಿಕಾದ Thoeborn ಎನ್ನುವ ವೈದ್ಯರ ಪರಿಚಯವಾಗಿ ಮುಂದಿನ ಶಿಕ್ಷಣಕ್ಕೆ ಮಾರ್ಗದರ್ಶನ ಪಡೆದರು. ಸಹಾಯ ಹಸ್ತ ನೀಡಲು ಬಂದ ಸ್ಥಳೀಯರು ಆನಂದಿಬಾಯಿಯವರಿಗೆ ಕ್ರೈಸ್ತ ಮತಕ್ಕೆ ಮತಾಂತರವಾಗಲು ಬಹಳ ಹಿಂಸಿಸುತ್ತಿದ್ದರು. ಆನಂದಿಬಾಯಿಯವರು ದೃಢ ಮನಸ್ಕರು, ಅವರು ಸೆರಂಪೂರ್ ಕಾಲೇಜಿನಲ್ಲಿ ಒಮ್ಮೆ ಮಾಡಿದ ಭಾಷಣದಲ್ಲಿ ಅವರ ದೇಶ ಪ್ರೇಮ ವ್ಯಕ್ತವಾಗುತ್ತದೆ. ಅವರ ಭಾಷಣದ ತುಣುಕು ಹೀಗಿದೆ. 'ಭಾರತದಲ್ಲಿ ಸ್ತ್ರೀ ವೈದ್ಯರ ಅಗತ್ಯತೆ ಇದೆ. ನಾನು ಅಮೇರಿಕಾಗೆ ಹೋಗಿ ವೈದ್ಯ ಶಿಕ್ಷಣ ಪಡೆದು ಭಾರತದಲ್ಲಿ ಮಹಿಳಾ ವೈದ್ಯಕೀಯ ಕಾಲೇಜು ಪ್ರಾರಂಭಿಸುವುದೇ ನನ್ನ ಗುರಿ. ಆದರೆ ಯಾವುದೇ ಕಾರಣಕ್ಕೂ ಮತಾಂತರವಾಗುವುದಿಲ್ಲ' ಇದರ ನಂತರ ಆರ್ಥಿಕ ನೆರವು ಹರಿಯಲಾರಂಭಿಸಿತು.

ಕ್ರಿ.ಶ. 1883 ರಲ್ಲಿ ಕಲ್ಕತ್ತಾದಿಂದ ಪ್ರಯಾಣಬೆಳಸಿ ನ್ಯೂಯಾರ್ಕ್ ತಲುಪಿದರು. ಅಲ್ಲಿ Thoeborn ಮತ್ತು Theodicia ರವರ ಸಹಾಯದಿಂದ ಜೂನ್ 1883ಯಲ್ಲಿ 'Women's Medical College of Pennsylvania' ದಲ್ಲಿ ಮಹಿಳೆಯರ ಮೆಡಿಕಲ್ ಪ್ರೊಗ್ರಾಮ್ ಗಾಗಿ ಅರ್ಜಿ ಹಾಕಿದರು. ಕಾಲೇಜಿನ ಮುಖ್ಯಸ್ಥ Rachel Bodley ಯವರು ಆನಂದಿಬಾಹಿಯವರನ್ನು ದಾಖಲಿಸಿಕೊಂಡು ಅವರಿಗೆ ಅವಶ್ಯಕವಾದ ವಿದ್ಯಾರ್ಥಿವೇತನವನ್ನು ಒದಗಿಸಿದರು. ಆನಂದಿಬಾಯಿಯವರು ಕಷ್ಟಪಟ್ಟು ಓದು ಮುಂದುವರಿಸಿದರು. ಆದರೆ ಅಲ್ಲಿಯ ವಾಯುಗುಣ ಹಾಗೂ ಆಹಾರ ಪದ್ಧತಿಯಿಂದ ಆರೋಗ್ಯ ಹಾಳಾಗಿ ಕ್ಷಯರೋಗಕ್ಕೆ ತುತ್ತಾದರು. ಈ ಎಲ್ಲಾ ಅಡಚಣೆಗಳಿದ್ದರೂ ಆಕೆಯ ಸಾಧಕ ಮನೋಭಾವ ದೃಢವಾಗುತ್ತಲೇ ಇತ್ತು. ಅಂತಿಮವಾಗಿ ಪ್ರಬಂಧ ಮಂಡಿಸಿ ಮಾರ್ಚ್ 1886 ರಂದು ಎಂ. ಡಿ. ಪದವಿ ಪಡೆದರು. ಅವರು ಪ್ರಬಂಧ ಮಂಡನೆಗೆ ಆಯ್ದ ವಿಷಯ 'ಹಿಂದೂ ಆರ್ಯರ ಪ್ರಸವ ಶಾಸ್ತ್ರ' (Obstetrics among the Hindu Aryan). ಆನಂದಿಬಾಯಿ ಯವರ ಘಟಿಕೋತ್ಸವಕ್ಕೆ ರಾಣಿ ವಿಕ್ಟೋರಿಯಾರವರು ಶುಭಹಾರೈಕೆ ಕಳುಹಿಸಿದ್ದರು.

ಅಕ್ಟೋಬರ್ 1886 ರಲ್ಲಿ ಭಾರತಕ್ಕೆ ಹಿಂದಿರುಗಿದಾಗ ಅವರಿಗೆ ಭವ್ಯ ಸ್ವಾಗತ ಕಾದಿತ್ತು. ಸಾವಿರಾರು ಜನ ಹೆಮ್ಮೆಯಿಂದ ಹಾಡಿ ಹೊಗಳಿದರು. ಸುಬೋಧ ಪತ್ರಿಕೆಯಲ್ಲಿ ಅವರ ಸರಳ ಉಡುಪು, ಸಜ್ಜನಿಕೆ, ದೇಶಾಭಿಮಾನ, ದೇಶದ ಕ್ಷೇಮಾಭಿವೃಧ್ಧಿಯ ಆಲೋಚನೆ, ಮತಧರ್ಮದ ಅಭಿಮಾನ ಎಲ್ಲವೂ ಮೆಚ್ಚತಕ್ಕದ್ದು ಎಂದು ತಿಳಿಸಲು ಹೆಮ್ಮೆ ಎನ್ನಿಸುತ್ತದೆ. ಎಂದು ಬರೆದಿದ್ದರು.

ಆನಂದಿಬಾಯಿಯವರು ವಿದೇಶದಿಂದ ಹಿಂದಿರುಗಿದವರೆ ಕೊಲ್ಹಾಪುರದ Albert Edward ಆಸ್ಪತ್ರೆಯಲ್ಲಿ ಮಹಿಳೆಯರ ವಾರ್ಡಿನಲ್ಲಿ ಸ್ತ್ರೀ ವೈದ್ಯರಾಗಿ ಸೇವೆ ಪ್ರಾರಂಭಿಸಿದರು. ಒಳ್ಳೆಯವರನ್ನು ದೇವರು ಹೆಚ್ಚುದಿನ ಉಳಿಸುವುದಿಲ್ಲ. ಆನಂದಿಗೆ ಕ್ಷಯರೋಗ ಉಲ್ಬಣಾವಸ್ಥೆಗೆ ಬಂದು 26-02-1887 ರಂದು ಪತಿಯ ಮಡಿಲಲ್ಲಿ ಅಸು ನೀಗಿದರು. ಆಕೆ ಕಣ್ಮರೆಯಾದರೂ ಮಹಿಳೆಯರಿಗೆ, ಸಮಾಜ ಸೇವಕರಿಗೆ ಪ್ರೇರಣಾದಾಯಕರಾಗಿದ್ದಾರೆ. ●

4ನೇ ಪುಟದಿಂದ..... **ವಿದ್ಯಾರ್ಥಿಗಳಿಗೆ ಹಿತವಚನ...**

**"ಯಲ್ಲಭಸೇ ನಿಜಕರ್ಮೋಪಾತ್ತಂ**
**ವಿತ್ತಂ ತೇನ ವಿನೋದಯಚಿತ್ತಂ"**

ನಿನ್ನ ಸಹಜವಾದ ಕರ್ಮ, ವೃತ್ತಿ ಅಥವಾ ಕರ್ತವ್ಯದಿಂದ ಏನು ಸಿಗುತ್ತೋ ಅದರಿಂದ ಮನಸ್ಸನ್ನು ಸಂತುಷ್ಟವಾಗಿಡು. ಖುಷಿಪಡು ಎಂದು.

ಅಂದರೆ ನಿನ್ನ ಸಹಜ ಕರ್ತವ್ಯದಿಂದಲ್ಲದೆ ಇತರ ಮಾರ್ಗಗಳಿಂದ ಅಕ್ರಮವಾಗಿ ಧನಸಂಪಾದನೆ ಮಾಡಿದರೆ ಅದರಿಂದ ಸುಖಸಿಗದು ಎನ್ನುತ್ತಾರೆ.

**"ಮಾಯಾಮಯಮಿದಮಖಿಲಂಹಿತ್ವಾ**
**ಬ್ರಹ್ಮಪದಂ ತ್ವಂ ಪ್ರವಿಶ ವಿದಿತ್ವಾ"**

ನಿನ್ನ ಸುತ್ತಲಿನ ಈ ಪ್ರಪಂಚವೆಂಬ ಮಾಯೆಯಿಂದ ಹೊರಬಂದು ಶಾಶ್ವತ ಸುಖನೀಡುವ ಬ್ರಹ್ಮಪದವನ್ನು ಹೊಂದು, ಎಂದು.

**ಅರ್ಥಮನರ್ಥಂ ಭಾವಯನಿತ್ಯಂ**
**ನಾಸ್ತಿ ತತಃ ಸುಖ ಲೇಶಃ ಸತ್ಯಂ ॥**

ಹಣ ಅಥವಾ ಅರ್ಥ ಅನರ್ಥಕ್ಕೇ ಕಾರಣ. ಅದರಿಂದ ಲವಲೇಶ ಸುಖವೂ ಸಿಗದು. ಇದು ಸತ್ಯ ಎನ್ನುತ್ತಾರೆ ಅವರು. ಇದು ಸತ್ಯವೆಂದು ಗೊತ್ತಿದ್ದರೂ ನಾವು ಅದರ ಹಿಂದೆಯೇ ಹೋಗುತ್ತೇವೆ. ಪರಿಣಾಮ ಅನರ್ಥವೇ!

**ಸರ್ವಪರಿಭವ ಭೋಗತ್ಯಾಗಃ**
**ಕಸ್ಯಸುಖಂನಕರೋತಿವಿರಾಗಃ ॥**

ಸುಖವೆಂಬ ಮರೀಚಿಕೆಯ ಬೆನ್ನು ಹತ್ತಿ ನೀನು ಸಂಪಾದಿಸಿದ ಎಲ್ಲಾ ಭೋಗವಸ್ತುಗಳನ್ನು ತ್ಯಜಿಸು. ಹೀಗೆ ವಸ್ತು, ವ್ಯಕ್ತಿ, ವಿಷಯಗಳ ಮೇಲಿನ ಮೋಹವನ್ನು ಬಿಟ್ಟು ವಿರಕ್ತನಾದರೆ ಸಿಗುವ ಸುಖಕ್ಕಿಂತ ಮೇಲಿನ ಸುಖ ಇನ್ನೆಲ್ಲಿಯದು? ಎಂದು ಕೇಳುತ್ತಾರೆ.

ಮೇಲೆ ಹೇಳಿದ ಎಲ್ಲಾ ಸಂಗತಿಗಳೂ ಸತ್ಯಸ್ಯಸತ್ಯ ಎಂದು ಗೊತ್ತಿದ್ದರೂ ನಾವು ಮತ್ತೆ ಅದೇ ಬಲೆಯಲ್ಲಿ ಬೀಳುತ್ತೇವೆ. ನಾವು ನಮ್ಮ ಸುತ್ತಮುತ್ತ ಒಮ್ಮೆ ಗಮನಿಸಿ ನೋಡೋಣವಂತೆ ಶಂಕರಾಚಾರ್ಯರು ಹೇಳಿದ ಮೇಲಿನ ಮಾತುಗಳು ನೂರಕ್ಕೆ ನೂರು ಸತ್ಯ ಎಂದು ಕಂಡು ಬರುವುದು. ಅಕ್ರಮವಾಗಿ ಆಸ್ತಿ, ಹಣ, ಸೈಟು ಸಂಪಾದನೆ ಮಾಡಿದವರೆಲ್ಲರೂ ಮೊದಲಿಗೆ ಸಂತೋಷ – ಖುಷಿ ಅನುಭವಿಸುತ್ತಾರೆ. ಈ ಸುಖ ಕೆಲವೇ ಸಮಯ ಉಳಿದಿರುತ್ತದೆ. ಮತ್ತೆ ಜೈಲಾದರೂ ಆಗಬಹುದು, ಇಲ್ಲ ಕೆಟ್ಟ ಹೆಸರೂ ಬರಬಹುದು, ತನ್ನವರು ಅಂದುಕೊಂಡವರು ಕೈಬಿಟ್ಟು ಹೋಗಬಹುದು. ಕೊನೆಯ ತನಕವಂತೂ ಸುಖದಿಂದಿರುವ ಉದಾಹರಣೆಯಿಲ್ಲ.

**ಯಾವದ್‌ವಿತ್ತೋ ಪಾರ್ಜನಶಕ್ತಃ**
**ತಾವನ್ನಿಜ ಪರಿವಾರೋರಕ್ತಃ**
**ಪಶ್ಚಾಜ್ಜೀವತಿ ಜರ್ಝರ ದೇಹೇ**
**ವಾರ್ತಾಂಕೋಪಿನಪೃಚ್ಛತಿಗೇಹೇ॥**

ಎಲ್ಲಿಯವರೆಗೆ ನಿನ್ನಲ್ಲಿ ಸಂಪತ್ತಿರುವುದೋ ಅಲ್ಲಿಯವರೆಗೆ ಆಳು, ಕಾಳು, ಹೆಂಡತಿ, ಮಕ್ಕಳು ಪರಿವಾರ – ಹೀಗೆ ಎಲ್ಲರೂ ಇರುತ್ತಾರೆ. ಹಣವಿಲ್ಲದೆ ದೇಹ ಜರ್ಝರಿತವಾದಾಗ ನಿನ್ನ ಸುದ್ಧಿಯನ್ನೂ ಕೇಳುವವರಿಲ್ಲದಾಗುತ್ತಾರೆ ಎಂದು ಎಚ್ಚರಿಸುತ್ತಾರೆ.

**ಅಂಗಂಗಲಿತಂ, ಪಲಿತಂಮುಂಡಂ**
**ದಶನವಿಹೀನಂ ಜಾತಂ ತುಂಡಂ ।**
**ವೃದ್ಧೋಯಾತಿಗೃಹೀತ್ವಾದಂಡಂ**
**ತದಪಿನಮುಂಚತಿಆಶಾಪಿಂಡಮ್ ॥**

ಪ್ರತಿಯೊಬ್ಬ ವ್ಯಕ್ತಿಯ ಜೀವನವೂ ಸಾಗುವ ಬಗೆಯನ್ನು ಹೇಗೆ ಹೇಳಿದ್ದಾರೆ ನೋಡಿ –

ದೇಹದ ಅಂಗಾಂಗಗಳು ಶಿಥಿಲವಾಗಿವೆ, ಮುಂಡ ಹಣ್ಣಾಗಿದೆ. ಬಾಯಲ್ಲಿ ಹಲ್ಲುಗಳಿಲ್ಲದಾಗಿದೆ. ವ್ಯಕ್ತಿ ವೃದ್ಧನಾಗಿ ದಂಡ, ಕೋಲಿಲ್ಲದೆ ನಡೆಯದವನಾಗಿದ್ದಾನೆ. ಆದರೂ ಆಶೆಯ ಪಿಂಡವನ್ನು ಬಿಡುವಂತಿಲ್ಲ. ಏನಾಶ್ಚರ್ಯವಿದು ಅನ್ನುತ್ತಾರೆ ಅವರು. ನಮ್ಮಲ್ಲಿ ಒಬ್ಬೊಬ್ಬರಿಗೂ ಒದಗುವ ಸ್ಥಿತಿಯನ್ನು ಅದೆಷ್ಟು ಚೆನ್ನಾಗಿ ವಿವರಿಸಿದ್ದಾರೆ!



**ಉಪನಿಷತ್ತುಗಳಿಗೆ ವಾಪಸ್ಸು ಹೋಗಿ, ಅವುಗಳಲ್ಲಿ ಬೆಳಕು ಬೀರುವ, ಶಕ್ತಿದಾಯಕವಾದ, ಜ್ಯೋತಿರ್ಮಯವಾದ ತತ್ತ್ವಶಾಸ್ತ್ರವಿದೆ. ಹಾಗೂ ಎಲ್ಲ ಬಗೆಯ ರಹಸ್ಯ ಸಂಗತಿಗಳಿಂದ, ಎಲ್ಲ ಬಗೆಯ ದೌರ್ಬಲ್ಯಗಳಿಂದ ನಿಮ್ಮನ್ನು ನೀವು ಬಿಡಿಸಿಕೊಳ್ಳಿ.**
**– ಸ್ವಾಮಿ ವಿವೇಕಾನಂದ**

# ಕೇಂದ್ರ ಸರ್ಕಾರಕ್ಕೆ ಏಪ್ರಿಲ್ 25 ರಂದು ದೆಹಲಿಯಲ್ಲಿ ಶೈಕ್ಷಿಕ ಮಹಾಸಂಘದ ವತಿಯಿಂದ ಸಲ್ಲಿಸಲಾಗುವ ಶಿಕ್ಷಕರ ಬೇಡಿಕೆಗಳ ಪಟ್ಟಿ

## ನಮ್ಮ ಬೇಡಿಕೆಗಳು

1. ರಾಷ್ಟ್ರೀಯ ಅಸ್ಮಿತೆ, ಭಾರತೀಯ ಜೀವನ ಮೌಲ್ಯಗಳು, ಚಾರಿತ್ರ್ಯ ನಿರ್ಮಾಣ, ಮಾನವೀಯ ಮೌಲ್ಯಗಳು, ಸಾಮಾಜಿಕ ಕಳಕಳಿ, ಮೌಲಿಕ ಚಿಂತನೆ, ಸಂಶೋಧನೆ ಮತ್ತು ನೂತನ ಆವಿಷ್ಕಾರಗಳನ್ನು ಒಳಗೊಳ್ಳುವಂತೆ ಇಂದಿನ ಶಿಕ್ಷಣ ಪದ್ಧತಿಯನ್ನು ಸಂಪೂರ್ಣವಾಗಿ ಪುನರ್‌ರಚಿಸಬೇಕು.

2. ಶಿಕ್ಷಣ ವ್ಯವಸ್ಥೆಯನ್ನು ನಿಯಂತ್ರಿಸಿ ಕ್ರಮಬದ್ಧಪಡಿಸಲು ಕೇಂದ್ರ ಮತ್ತು ರಾಜ್ಯ ಸ್ತರಗಳಲ್ಲಿ ಶಿಕ್ಷಣ ತಜ್ಞರನ್ನು ಒಳಗೊಂಡ ಒಂದು ಸ್ವತಂತ್ರ ಸ್ವಾಯತ್ತ ಆಯೋಗವನ್ನು ರಚಿಸಬೇಕು.

3. ಶಿಕ್ಷಣ ಕ್ಷೇತ್ರದ ಮೂಲಭೂತ ಸೌಲಭ್ಯಗಳಾದ ಶಾಲಾ ಕಟ್ಟಡಗಳು, ಆಟದ ಮೈದಾನ, ಪುಸ್ತಕಗಳು ಮತ್ತು ಪಾಠ ಮಾಡಲು ಅಧ್ಯಾಪಕರುಗಳನ್ನು ಒದಗಿಸುವುದಕ್ಕಾಗಿ ಕೇಂದ್ರ ಸರ್ಕಾರವು ತನ್ನ ಜಿ.ಡಿ.ಪಿ.ಯ ಪ್ರತಿಶತ 15% ರಷ್ಟನ್ನು ರಾಜ್ಯ ಸರ್ಕಾರಗಳು ತಮ್ಮ ಬಜೆಟ್‌ನ ಶೇಖಡಾ 30% ರಷ್ಟನ್ನು ಖರ್ಚು ಮಾಡಬೇಕು.

4. ಇಡೀ ದೇಶದಲ್ಲಿ ಶಿಕ್ಷಣದ ಸ್ವಾಯತ್ತತೆಯನ್ನು ಕಾಪಾಡಲು, ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲ ನಿರ್ಣಯಗಳಲ್ಲೂ ಶಿಕ್ಷಕರ ಭಾಗವಹಿಸುವಿಕೆ ಕಡ್ಡಾಯವಾಗಬೇಕು ಮತ್ತು ಯಾವುದೇ ಬಗೆಯ ರಾಜಕೀಯ, ಆಡಳಿತಾತ್ಮಕ ಹಸ್ತಕ್ಷೇಪವನ್ನು ತಡೆಗಟ್ಟಬೇಕು.

5. ಉಚಿತ ಹಾಗೂ ಕಡ್ಡಾಯ ಶಿಕ್ಷಣ ಕಾಯಿದೆಯನ್ನು ಸುಸಂಗತ ಮತ್ತು ವ್ಯಾವಹಾರಿಕಗೊಳಿಸಿ ಅದರ ಪಾಲನೆಯನ್ನು ಕಾರ್ಯರೂಪಗೊಳಿಸಲು ಬೇಕಾದ ಹಣ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಬೇಕು.

6. ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿ ಮಾತೃಭಾಷೆಯಲ್ಲಿಯೇ ಇರಬೇಕು.

7. ರಾಷ್ಟ್ರದ ಎಲ್ಲಾ ಮಹಾವಿದ್ಯಾಲಯಗಳಲ್ಲೂ ವಿವಿಧ ಅಧ್ಯಾಪಕ ಹುದ್ದೆಗಳ ಹೆಸರುಗಳನ್ನು ಯುಜಿಸಿ ಶಿಫಾರಸ್ಸಿನಂತೆ ಸಹಾಯಕ ಪ್ರೊಫೆಸರ್, ಅಸೋಸಿಯೇಟ್ ಪ್ರೊಫೆಸರ್ ಹಾಗೂ ಪ್ರೊಫೆಸರ್ ಎಂದು ಏಕರೂಪಗೊಳಿಸಬೇಕು.

8. ಇಡೀ ದೇಶದಲ್ಲಿ ಅನುದಾನಿತ ವಿದ್ಯಾಲಯ ಹಾಗೂ ಮಹಾವಿದ್ಯಾಲಯದ ಶಿಕ್ಷಕರಿಗೆ ವೇತನವನ್ನು ಬ್ಯಾಂಕ್ ಮೂಲಕವೇ ವಿತರಿಸಬೇಕು.

9. ಶಿಕ್ಷಣದ ವ್ಯಾಪಾರೀಕರಣದ ಮೇಲೆ ಹತೋಟಿ ಇರಬೇಕು.

10. ದೇಶದಾದ್ಯಂತ ಏಕರೂಪ ವೇತನ ನಿಯಮ ಮತ್ತು ಏಕರೂಪ ಸೇವಾ ನಿಯಮವನ್ನು ಜಾರಿಗೆ ತಂದು ಸಮಾನಕಾರ್ಯಕ್ಕೆ ಸಮಾನ ವೇತನ ಎಂಬ ಸಿದ್ಧಾಂತವನ್ನು ಪಾಲಿಸಬೇಕು.

11. ಇಡೀ ದೇಶದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಡೆಸುವ ವಿದ್ಯಾ ಸಂಸ್ಥೆಗಳಲ್ಲಿ ಪ್ರಾಥಮಿಕ ಶಿಕ್ಷಕರಿಂದ ಹಿಡಿದು ಕಾಲೇಜು ಶಿಕ್ಷಕರವರೆಗೆ ಲಕ್ಷಾಂತರ ಹುದ್ದೆಗಳು ಖಾಲಿ ಇವೆ. ಸರ್ಕಾರಗಳು ತಮ್ಮ ಆರ್ಥಿಕ ಹೊರೆಯನ್ನು ತಗ್ಗಿಸಲು ವಿದ್ಯಾರ್ಥಿ ಮಿತ್ರ, ಶಿಕ್ಷಾಕರ್ಮಿ, ಸೇವಿಕಾ ಶಿಕ್ಷಕ, ಅತಿಥಿ ಶಿಕ್ಷಕ, ಶಿಕ್ಷಾ ಮಿತ್ರ, ಪೈರಾ ಶಿಕ್ಷಕ ಇತ್ಯಾದಿ ತಾತ್ಕಾಲಿಕ ಹುದ್ದೆಗಳನ್ನು ನಿರ್ಮಿಸುತ್ತಿವೆ. ಶಿಕ್ಷಣದಲ್ಲಿ ಗುಣಮಟ್ಟವನ್ನು ತರಲು ಈ ತಾತ್ಕಾಲಿಕ ವ್ಯವಸ್ಥೆಯನ್ನು ಕೂಡಲೇ ನಿಲ್ಲಿಸಬೇಕು ಮತ್ತು ವಿದ್ಯಾರ್ಥಿ – ಶಿಕ್ಷಕ ಪ್ರಮಾಣವನ್ನು 1:30ರಂತೆ ದೃಢೀಕರಿಸಿ ಕೂಡಲೇ ಎಲ್ಲಾ ವಿಷಯಗಳ ಅಧ್ಯಾಪಕ, ಪ್ರಾಧ್ಯಾಪಕರನ್ನು ಶಾಶ್ವತ ಆಧಾರದ ಮೇಲೆ ನಿಯುಕ್ತಿ ಮಾಡಿಕೊಳ್ಳಬೇಕು.

12. ಇಡೀ ದೇಶದಲ್ಲಿ ಶಿಕ್ಷಕ ಸೇವಾ ನಿವೃತ್ತಿಯ ವಯಸ್ಸನ್ನು ಯುಜಿಸಿ ಯಂತೆ 65 ವರ್ಷಕ್ಕೆ ನಿಗದಿತಗೊಳಿಸಬೇಕು.

13. 2004 ಜನವರಿ 1ಕ್ಕೆ ಇದ್ದ ಮುನ್ನ ಪೆನ್ಷನ್ ಸ್ಕೀಂ ಅನ್ನು ಪುನರ್‌ಜೀವನಗೊಳಿಸಿ ಎಲ್ಲಾ ಶಾಲಾ ಕಾಲೇಜುಗಳ ಶಿಕ್ಷಕರಿಗೆ ಅನ್ವಯಿಸಬೇಕು.

14. ಶಾಲಾ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಎಲ್ಲಾ ವರ್ಗದ ಶಿಕ್ಷಕರುಗಳಿಗೆ ಉಚಿತ ವೈದ್ಯಕೀಯ ಸೌಲಭ್ಯವನ್ನು ಒದಗಿಸುವ ಹೆಲ್ತ್ ಕಾರ್ಡ್‌ನ್ನು ನೀಡಬೇಕು ಮತ್ತು ಅದನ್ನು ಸರಿಯಾಗಿ ಕಾರ್ಯರೂಪಕ್ಕೆ ತರಬೇಕು,

15. ಶಾಲಾ ಕಾಲೇಜುಗಳಲ್ಲಿ ಶಾಶ್ವತವಾಗಿ ಶಿಕ್ಷಕರನ್ನು ನಿಯೋಜಿಸುವವರೆಗೆ ತಾತ್ಕಾಲಿಕವಾಗಿ ಕೆಲಸ ಮಾಡುತ್ತಿರುವ ವಿದ್ಯಾರ್ಥಿ ಮಿತ್ರ, ಅತಿಥಿ ಉಪನ್ಯಾಸಕ ಇತ್ಯಾದಿ ಇತ್ಯಾದಿ ಶಿಕ್ಷಕರಿಗೆ ಒಂದು ನಿರ್ದಿಷ್ಟ ವೇತನವನ್ನು ನಿಗದಿತಗೊಳಿಸಬೇಕು ಹಾಗೂ ಸೇವಾ ನಿಯಮಗಳನ್ನು ರೂಪಿಸಬೇಕು. ●

# ಶಿಕ್ಷಕರೇ ಗಮನಿಸಿ...

**ಶಿಕ್ಷಣವು "ಚಾರಿತ್ರ್ಯ ನಿರ್ಮಾಣವನ್ನು ಉಂಟು ಮಾಡಬೇಕು" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಅದನ್ನು ಹೇಗೆ ಮಾಡುವುದು ? ಅದಕ್ಕಾಗಿ ಈ ಕೆಳಕಂಡ ಕೆಲವು ಸಲಹೆಗಳನ್ನು ದಯವಿಟ್ಟು ಗಮನಿಸಿ.**

**ಬರಲಿರುವ ಶೈಕ್ಷಣಿಕ ವರ್ಷದಲ್ಲಿ ನಿಮ್ಮ ನಿಮ್ಮ ತರಗತಿಗಳಲ್ಲಿ ಅನುಷ್ಠಾನಗೊಳಿಸಲು ದಯವಿಟ್ಟು ಪ್ರಯತ್ನಿಸಿ.**

1. ಪ್ರತಿಯೊಬ್ಬ ಮಾನವನ ವ್ಯಕ್ತಿತ್ವದಲ್ಲಿಯೂ "ಆಧ್ಯಾತ್ಮಿಕ ಆಯಾಮ" ಎನ್ನುವುದು ಇದೆ. ಅದೇ ದೈವೀ ಚೈತನ್ಯದ ಕೇಂದ್ರ. ನಮ್ಮ ದೈಹಿಕ, ಮಾನಸಿಕ, ಭಾವನಾತ್ಮಕ ಶಕ್ತಿಗಳೆಲ್ಲವೂ ಚೈತನ್ಯವನ್ನು ಪಡೆದುಕೊಳ್ಳುವುದು ಅದರಿಂದಲೇ. ಅದರ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಿರಿ. ಅದರ ಪ್ರಜ್ಞೆ ಉಂಟಾಗಲು ನೈತಿಕ ಮತ್ತು ಧಾರ್ಮಿಕ ಮೌಲ್ಯಗಳನ್ನು ಆಚರಣೆಗೆ ತರಬೇಕು ಎಂದು ಹೇಳಿಕೊಡಿ.

2. ಮಾನಸಿಕ ಮತ್ತು ದೈಹಿಕ ಶಕ್ತಿಗಳನ್ನು ಪೋಲು ಮಾಡದೆ ರಕ್ಷಿಸಿಕೊಳ್ಳಬೇಕಾದ ಅಗತ್ಯವನ್ನು ಮಕ್ಕಳಿಗೆ ಒತ್ತಿ ಹೇಳಿರಿ. ಇದರಿಂದ ಅವರು ಸಕ್ರಿಯಾತ್ಮಕ ಚಾರಿತ್ರ್ಯವನ್ನು ಬೆಳೆಸಿಕೊಳ್ಳುತ್ತಾರೆ, ಹಾಗೂ ಜೀವನದ ಸವಾಲುಗಳನ್ನು ಬುದ್ಧಿವಂತಿಕೆಯಿಂದಲೂ, ಧೈರ್ಯದಿಂದಲೂ ಎದುರಿಸಬಲ್ಲ ಹಾಗೂ ಶಕ್ತಿಶಾಲಿ ವ್ಯಕ್ತಿತ್ವವನ್ನು ಪಡೆದುಕೊಳ್ಳುತ್ತಾರೆ.

3. ನಮ್ಮ ಭಾರತೀಯ ಆಧ್ಯಾತ್ಮಿಕ ಸಾಂಸ್ಕೃತಿಕ ಪರಂಪರೆಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವಂತಹ ಅಧ್ಯಯನ ಹಾಗೂ ಇನ್ನಿತರ ಚಟುವಟಿಕೆಗಳನ್ನು ಹಮ್ಮಿಕೊಳ್ಳಿ. ಆ ಮೂಲಕ ಅವರು ನಮ್ಮ ತಾಯ್ನಾಡಿನ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಸಂಪತ್ತಿನ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುವಂತೆ ಆಗುತ್ತದೆ. ಈ ಮಕ್ಕಳು ದೊಡ್ಡವರಾದಾಗ, ತಾವು ಕಂಡುಕೊಂಡ ಭವ್ಯ ಪರಂಪರೆಯ ಸಂಪತ್ತನ್ನು ತಮ್ಮ ಮುಂದಿನ ಪೀಳಿಗೆಯವರಿಗೆ ರವಾನಿಸಲು ಇದರಿಂದ ಅನುಕೂಲವಾಗುತ್ತದೆ.

4. ಈಗಿನ ಕಾಲದಲ್ಲಿ ಬೆಳೆಸಿಕೊಳ್ಳಬೇಕಾದ ನೂತನ ವೈಜ್ಞಾನಿಕ ಮತ್ತು ತಾಂತ್ರಿಕ ಮೌಲ್ಯಗಳನ್ನು, ಪುರಾತನ ಸಾಂಪ್ರದಾಯಿಕ ಮೌಲ್ಯಗಳೊಡನೆ ವಿದ್ಯಾರ್ಥಿಗಳು ಸಮನ್ವಯ ಮಾಡಿಕೊಳ್ಳುವ ಆವಶ್ಯಕತೆ ಇಂದು ಬಹಳವಾಗಿ ಇದೆ. ಆ ಮೂಲಕ ಅವರು ಆಧುನಿಕ ಸಮಾಜದಲ್ಲಿ ಬೀಡು ಬಿಟ್ಟಿರುವ ಅಧಿಕಾರ, ಹಣ, ಕೀರ್ತಿ ಮುಂತಾದ ತಪ್ಪು ಮೌಲ್ಯಗಳಿಗೆ ಆಕರ್ಷಿತರಾಗಿ, ಕೆಟ್ಟ ಮಾರ್ಗವನ್ನು ತುಳಿಯುವುದು ತಪ್ಪುತ್ತದೆ. ಅದನ್ನು ಹೇಗೆ ಮಾಡಿಕೊಳ್ಳಬೇಕು ಎಂಬುದರ ಬಗ್ಗೆ ದಯವಿಟ್ಟು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ. ಇದರ ಬಗ್ಗೆ ಸಹಾಯಕ ಸೂತ್ರಗಳನ್ನು ಸ್ವಾಮಿ ವಿವೇಕಾನಂದರ **'ಕೊಲಂಬೋದಿಂದ ಆಲ್ಮೋರಾಕ್ಕೆ'** ಎಂಬ ಪುಸ್ತಕದಿಂದ ಪಡೆದುಕೊಳ್ಳಬಹುದು. ಅಥವಾ ಅದರ ಸಂಗ್ರಹವಾದ **'ರಾಷ್ಟ್ರ ನಿರ್ಮಾಣ'** ಎಂಬ ಪುಸ್ತಕದ ಪ್ರಯೋಜನವನ್ನೂ ಪಡೆಯಬಹುದು. ಈ ಪುಸ್ತಕಗಳು ಹತ್ತಿರದ ರಾಮಕೃಷ್ಣ ಆಶ್ರಮಗಳಲ್ಲಿ ಸಿಗುತ್ತದೆ.

5. ವಿದ್ಯಾರ್ಥಿಗಳು ತಮ್ಮ ಸುತ್ತಲಿನ ಸಮಾಜ ಮತ್ತು ವ್ಯಕ್ತಿಗಳೊಡನೆ ಸುಮಧುರ ಸಂಬಂಧವನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ಅವರ ವೈಯಕ್ತಿಕ ಜೀವನ ಮತ್ತು ರಾಷ್ಟ್ರದ ಸಾಮಾಜಿಕ ಜೀವನ ಉತ್ತಮಗೊಳ್ಳುತ್ತದೆ. ಹೀಗಾಗಿ ಉತ್ತಮ ಮಾನವೀಯ ಮೌಲ್ಯಗಳು, ಸತ್ಯನಿಷ್ಠೆ, ಮೃದುವಾದ ನಡವಳಿಕೆ, ಮಧುರವಾದ ಮಾತು, ಘನತೆವೆತ್ತ ಹಾವಭಾವ – ಇವನ್ನು ಗಳಿಸಿಕೊಳ್ಳುವತ್ತ ಅವರ ಗಮನವನ್ನು ಸೆಳೆಯಿರಿ. ಬರೀ ಬರಡು ಬೋಧನೆ ಮಾಡುವುದಕ್ಕಿಂತ ಆದರ್ಶ ವ್ಯಕ್ತಿಗಳ ಉದಾಹರಣೆ ನೀಡುವುದು ಒಳ್ಳೆಯದು. ಅದಕ್ಕಿಂತಲೂ ಶಿಕ್ಷಕರಾದ ನಾವೇ ಆ ಗುಣಗಳನ್ನು ನಮ್ಮ ಜೀವನದಲ್ಲಿ ತಂದುಕೊಂಡು ನಮ್ಮ ವಿದ್ಯಾರ್ಥಿಗಳಿಗೆ ಮಾದರಿಯಾಗುವುದು ಇನ್ನೂ ಉತ್ತಮ.

6. ಸಮಾಜ ಮತ್ತು ದೇಶದ ಒಳಿತಿಗೆ ಅದರ ಪ್ರತಿಯೊಬ್ಬ ಪ್ರಜೆಯೂ ಜವಾಬ್ದಾರನಾಗಿರುತ್ತಾನೆ. ಈ ಜವಾಬ್ದಾರಿ ಭಾವನೆಯನ್ನು ಮಕ್ಕಳಲ್ಲಿ ಮೂಡಿಸುವುದು ಕೂಡಾ ಬಹಳ ಅವಶ್ಯವಾದುದು. ಹಾಗೆಯೇ ಕರ್ತವ್ಯಪ್ರಜೆ ಕೂಡಾ. ನಮ್ಮ ದೇಶದ ಏಳ್ಗೆಗೆ ನಾವು ಮಾಡಬೇಕಾದ ಕರ್ತವ್ಯಗಳ ಬಗ್ಗೆ ವಿದ್ಯಾರ್ಥಿಗಳು ಅರಿತುಕೊಳ್ಳಬೇಕು. ಹೀಗೆ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ತಿಳಿದು ಆಚರಿಸುವ ವಿದ್ಯಾರ್ಥಿಗಳು ಮುಂದೆ ಪ್ರಬುದ್ಧ ಪ್ರಜೆಗಳಾಗುತ್ತಾರೆ.

**ಕೃಪೆ : ವಿವೇಕ ಪ್ರಭ**

# ಚಿತ್ರ ವರದಿ




ಮಹಾವೀರನ ಪ್ರತಿಮೆಯೊಂದಿಗೆ ಶ್ರೀ ಎಚ್ಚೆನ್ನಾರ್, ಶ್ರೀ ಬಾಲಕೃಷ್ಣ ಭಟ್, ಶ್ರೀ ಕೃ. ನರಹರಿ ಮತ್ತು ಶ್ರೀ ಜಿಎಸ್‌ಕೆ.



ಎಲ್ಲೋರಾದಲ್ಲಿ ಬ್ರಹ್ಮ-ವಿಷ್ಣು-ಮಹೇಶ್ವರರ ಅಪೂರ್ವ ಕೆತ್ತನೆ



ಎಲ್ಲೋರಾದಲ್ಲಿ ಭಗ್ನಗೊಂಡಿರುವ ದಶಾವತಾರದ ಚಿತ್ರಗಳು




ಘೃಶ್ಣೇಶ್ವರ ದೇವಾಲಯದ ಎದುರು ಕರ್ನಾಟಕದ ತಂಡ



ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಪದಾಧಿಕಾರಿಗಳು



ಪ್ರೊ. ಅನಿರುದ್ಧ ದೇಶಪಾಂಡೆಯವರು ಶಿಕ್ಷಕರನ್ನುದ್ದೇಶಿಸಿ ಮಾತನಾಡುತ್ತಿರುವುದು

# ದೆಹಲಿ ಚಲೋ

ಶಿಕ್ಷಕ ಬಂಧುಗಳೇ, ಇದೇ ಏಪ್ರಿಲ್ 25 ರಂದು ಪಾರ್ಲಿಮೆಂಟ್ ಭವನದೆದುರು ಪ್ರೈಮರಿ ಇಂದ ಕಾಲೇಜು ಹಂತದವರೆಗಿನ ಎಲ್ಲಾ ಶಿಕ್ಷಕರ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಗಿದೆ. ಧರಣಿಯ ಮುಂದಾಳತ್ವವನ್ನು ದೇಶದ ಅತಿ ದೊಡ್ಡ ಶಿಕ್ಷಕ ಸಂಘಟನೆ ಎಬಿಆರ್ಎಸ್ಎಂ ವಹಿಸಿ ಕೊಂಡಿದೆ.

## ಧರಣಿ ಏಕೆ ?

ಶಿಕ್ಷಕರ ಹಾಗೂ ಶಿಕ್ಷಣ ಕ್ಷೇತ್ರದ ಹಲವು ಸಮಸ್ಯೆಗಳು ಅನೇಕ ವರ್ಷಗಳಿಂದ ಪರಿಹಾರ ಕಾಣದೆ ನೆನೆಗುದಿಗೆ ಬಿದ್ದಿದೆ. ಅದನ್ನು ತ್ವರಿತವಾಗಿ ಪರಿಹರಿಸಬೇಕೆಂಬ ಆಗ್ರಹಕ್ಕಾಗಿ ಈ ಧರಣಿ.

## ಇದರಲ್ಲಿ ನಮ್ಮ ಪಾತ್ರವೇನು ?

* ಎಲ್ಲ ಶಿಕ್ಷಕರಿಗೂ ಬೇಡಿಕೆ ಪತ್ರದ ನಕಲು ಪ್ರತಿಯನ್ನು ಹಂಚಿರಿ. ನಮ್ಮ ಬೇಡಿಕೆಗಳ ಬಗ್ಗೆ ಮನದಟ್ಟು ಮಾಡಿಕೊಡಿ.
* ಧರಣಿಯಲ್ಲಿ ಭಾಗವಹಿಸಲು ದೆಹಲಿಗೆ ನಡೆಯಿರಿ.
* ನಿಮ್ಮ ಪ್ರದೇಶದ ಲೋಕಸಭಾ ಸದಸ್ಯರನ್ನು ಭೇಟಿ ಮಾಡಿ, ಬೇಡಿಕೆಯ ಪಟ್ಟಿಯನ್ನು ಸಲ್ಲಿಸಿ, ಲೋಕಸಭೆಯಲ್ಲಿ ನಮ್ಮ ಪರವಾಗಿ ಧ್ವನಿ ಎತ್ತಲು ಆಗ್ರಹಿಸಿ.

Reg. No. RNI 45459/85
CPMG/KA/BGS-125/2012-14
Posted at Bangalore GPO
Bangalore - 560 001

MARCH 2013
Date of Posting
20th or 21st of every month

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Sepecial) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ ''ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.

srushtidesigns@gmail.com